ಪ್ರಧಾನ ದಿವಾಣಿ ನ್ಯಾಯಾಧಿಶರು ಹಾಗೂ ಪ್ರ. ದ. ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,
ಚಿಕ್ಕೋಡಿ. ಸಾಃ ಚಿಕ್ಕೋಡಿ.

| | |
|---|---|
| ಓ ಎಸ್ ನಂ | 220/19 |
| ವಾದಿ ಸಂ | ಪಿ.ಡಬ್ಲ್ಯೂ1 |
| ದಿನಾಂಕ | 15-11-2022 |

<u>ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.</u>

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ ಜೆ ಟಿ ಬಿ ನ್ಯಾಯವಾದಿಗಳಿಂದ

ನನ್ನ ತಂದೆ ತೀರಿಕೊಂಡು ಈಗ 30 ವರ್ಷಗಳು ಕಳೆದಿರುತ್ತದೆ. ನಮ್ಮ ಮನೆತನದ ವ್ಯವಹಾರಗಳನ್ನು ನನ್ನ ತಂದೆ ಜೀವಂತ ಇರುವಾಗ ಅವರೇ ನೋಡಿ ಕೊಳ್ಳುತ್ತಿದ್ದರು ಎಂದು ಸೂಚಿಸುವುದು ಸರಿ. ನನ್ನ ತಂದೆ ತೀರಿಕೊಂಡ ನಂತರ ಮನೆತನದ ವ್ಯವಹಾರವನ್ನು ನಾನು ನೋಡಿ ಕೊಂಡು ಹೊಗುತ್ತಿದ್ದೇನು ಎಂದು ಸೂಚಿಸುವುದು ಸರಿ. ನನ್ನ ತಂದೆಯವರು ಜೀವಂತ ಇರುವಾಗ ಸದರಿಯವರು ದಾವಾ ಸ್ವತ್ತನ್ನು ಪ್ರತಿವಾದಿಯ ತಾತನಿಗೆ ನೀಡಿದ್ದರು ಎಂದು ಸೂಚಿಸುವುದು ಸರಿಯಲ್ಲ. ದಾವಾ ಸ್ವತ್ತುಗಳನ್ನು ನಾವು ಯಾರಿಗೂ ಯಾವುದೇ ರೀತಿಯಿಂದ ನೀಡಿರುವುದಿಲ್ಲ. ದಾವಾ ಸ್ವತ್ತುಗಳು ಜಮೀನು ಮತ್ತು ಮನೆಗಳು ನಮ್ಮ ಸ್ವಾದಿನತೆಯಲ್ಲಿ ಇರುತ್ತದೆ. ಸದರಿ ಆಸ್ತಿಗಳು ನಮ್ಮ ಪೂರ್ವಜರಿಂದಲೂ ಸಹ ನಮ್ಮ ಸ್ವಾದಿನತೆಯಲ್ಲಿ ಇರುತ್ತವೆ. ವಾದ ಪತ್ರವನ್ನು ತಯಾರಿಸಲು ನಮ್ಮ ವಕೀಲರಿಗೆ ನಾನೇ ಮಾತಿಹಿಯನ್ನು ನೀಡಿರುತ್ತೇನೆ. ನನ್ನ ಸಾಕ್ಷಿಯ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ತಯಾರಿಸಲು ನಮ್ಮ ವಕೀಲರಿಗೆ ನಾನೇ ಮಾಹಿತಿ ನೀಡಿರುತ್ತೇನೆ.

ಸದರಿ ದಾವೆಯನ್ನು ಜಮೀನಿನಲ್ಲಿರುವ ಮನೆಯ ಕುರಿತಾಗಿ ಹೂಡಿರುತ್ತೇವೆ. ದಾವೆಯನ್ನು ಹೂಡುವ ಸಮಯದಲ್ಲಿ ದಾವಾ ಸ್ವತ್ತಿನ ಮೌಲ್ಯ ಎಷ್ಟಾಗುತ್ತಿತ್ತು ನನಗೆ ಗೊತ್ತಿಲ್ಲ. ಈಗ ದಾವಾ ಸ್ವತ್ತಿನ ಮನೆ ಸುಮಾರು ರೂ.20 ಲಕ್ಷ ಬೆಲೆ ಬಾಳುತ್ತದೆ. ದಾವಾ ಸ್ವತ್ತನ್ನು ಪ್ರತಿವಾದಿಯ ಅಜ್ಜನಿಗೆ ಯಾರು ಯಾವಾಗ ನೀಡಿರುತ್ತಾರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನಲ್ಲಿ ಪ್ರತಿವಾದಿಯರ ತಂದೆಯ ತಂದೆ ಗುಡಿಸಲನ್ನು ಹಾಕಿಕೊಂಡಿದ್ದರು. ಸಾಕ್ಷಿ ಮುಂದುವರೆದು ನಮ್ಮವು ಗುಡಿಸಲುಗಳು ಇದ್ದವು ಎಂದು ನುಡಿಯುತ್ತಾರೆ. ಸದರಿ ಗುಡಿಸಲು ಇರುವ ಸ್ಥಳದಲ್ಲಿ ಪಕ್ಕಾ ಮನೆ ಕಟ್ಟಿಕೊಂಡಿದ್ದರು ಎಂದು ಸೂಚಿಸುವುದು ಸರಿಯಲ್ಲ. ಸದರಿ ದಾವಾ ಸ್ವತ್ತಿನಲ್ಲಿ ಸದರಿ ನಮ್ಮವು ಮನೆಗಳು ಇರುತ್ತವೆ. ದಾವಾ ಸ್ವತ್ತಿನಲ್ಲಿ ಈಗಲೂ ಸಹ ನಮ್ಮ ಹಿರಿಯರ ಕಾಲದಿಂದಲೂ ಇರುವ ಗುಡಿಸಲುಗಳು ಇರುತ್ತವೆ. ಈಗ ನೊಡುತ್ತಿರುವ ಛಾಯಾ ಚಿತ್ರದಲ್ಲಿ ಕಾಣುವ ಮನೆಗಳು ದಾವಾ ಸ್ವತ್ತಿನಲ್ಲಿ ಇರುವ

ಮನೆಗಳು ಇರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿ ಕೇಳಿದ ಪ್ರಶ್ನಗಳಿಗೆ ಸರಿಯಾಗಿ ಉತ್ತರ ಕೊಡದೇ ಪ್ರತಿವಾದಿ ನ್ಯಾಯಾವಾದಿಗಳು ಮೇಲೆ ಮತ್ತು ನ್ಯಾಯಾಲಯದ ಮೇಲೆ ಜೂರಾಗಿ ಬಾಯಿ ಮಾಡುತ್ತಾ ಮಾತನಾಡುತ್ತಿದ್ದು ಮುಂದುವರೆದ ಪಾಟೀ ಸವಾಲ ತೆಗೆದುಕೊಳ್ಳಲು ಸಾಧ್ಯ ಇರುವುದಿಲ್ಲ ಆದ್ದರಿಂದ ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.)

**(ಸಾಕ್ಷಿಯ ಹೇಳಿಕೆಯನ್ನು ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮುಖಾಂತರ ಬೆರಳಚ್ಚು ಮಾಡಿಸಿ ಸಾಕ್ಷಿದಾರರಿಗೆ ಓದಿ ಹೇಳಲಾಯಿತು)**

ಓ.ಹೇ.ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧಿಶರು,
ಚಿಕ್ಕೋಡಿ.